
# ತಾಯಿ ಹಕ್ಕಿ



ಆಗಸದೆತ್ತರ ಹಕ್ಕಿಯ ಹಿಂಡು
ಹಸಿವನು ನೀಗಲು ಹೊರಟಿತು ದಂಡು
ಪಟ ಪಟನೆಂದು ರೆಕ್ಕೆಯ ಬಿಚ್ಚಿ
ಹಿಂದಿರುಗುವೆವೆಂಬ ಸತ್ಯವ ನೆಚ್ಚಿ

ಬಾನಲಿ ತೇಲುವ ಮೋಡವ ದಾಟಿ
ಊರು ಕೇರಿಯ ದಾರಿಯ ಮೀಟಿ
ಹಾರುತ ಕೂಗುತ ಹೊರಟಿಹವು
ಗೂಡಲಿ ಮರಿಗಳ ಬಿಟ್ಟಿಹವು

ಗಿಡ ಮರ ಸುತ್ತಿ ಹಣ್ಣನು ಹೆಕ್ಕಿ
ಪೈರು ಪಚ್ಚೆಯ ದಂಟನು ಕುಕ್ಕಿ
ಮರಿಗಳ ನೆನೆದು ಬಾಯೊಳಿಟ್ಟು
ಹರುಷದಿ ಗೂಡನು ಸೇರಿಹವು

ಕರುಳ ಕುಡಿಗಳ ಮುದ್ದು ಮಾಡುತ
ಮಮತೆಯ ತುಂಬಿ ಮೋಹವ ತೋರುತ
ನಲಿದವು ಗೂಡಲಿ ಸಂತಸ ಬೀರುತ

ಕೊಕ್ಕಿಂದ ಕೊಕ್ಕಿಗೆ ತಿನಿಸನು ನೀಡುತ

ಮರಿಗಳ ಮಧುರ ಸದ್ದನು ಕೇಳುತ
ದಿನದಿನ ಕಳೆದವು ಆನಂದದಿ ಬಾಳುತ

ಗಿಡ ಮರಗಳು ಎಂದೂ ಉರುಳದೆ ಇರಲಿ
ಹಕ್ಕಿಯ ಸಂತತಿ ಸಾವಿರ ಸಾವಿರವಾಗಲಿ

**-ಸುಶೀಲಾ ಸೋಮಶೇಖರ್,**
**ಹಾಸನ**

# ಈರುಳ್ಳಿ ಕತ್ತರಿಸಿದರೆ ಕಣ್ಣೀರೇಕೆ?


ಒಂದು ಊರಿನಲ್ಲಿ ಈರುಳ್ಳಿ, ಟೊಮ್ಯಾಟೊ ಮತ್ತು ಐಸ್‌ಕ್ಯಾಂಡಿ ತುಂಬಾ ಸ್ನೇಹಿತರಾಗಿದ್ದವು. ಒಟ್ಟಿಗೆ ಆಟವಾಡುತ್ತಿದ್ದವು. ಹರಟೆ ಹೊಡೆಯುತ್ತಿದ್ದವು. ಜೊತೆಗೆ ಸುತ್ತಾಡುತ್ತಿದ್ದವು. ಕಷ್ಟ–ಸುಖಗಳಲ್ಲಿ ಭಾಗಿಗಳಾಗುತ್ತಿದ್ದವು. ತಮ್ಮ ಮನೆಗಳಲ್ಲಿ ಹಬ್ಬವಿದ್ದಾಗ ಪರಸ್ಪರ ಆಹ್ವಾನಿಸುತ್ತಿದ್ದವು.

ಒಂದು ದಿನ ಟೊಮ್ಯಾಟೊಗೆ ಹೊಳೆಯಲ್ಲಿ ಈಜು ಹೊಡೆಯುವ ಮನಸ್ಸಾಯಿತು. ಇಬ್ಬರು ಗೆಳೆಯರಿಗೆ ಈಜು ಹೊಡೆಯಲು ಹೋಗೋಣ ಎಂದು ಹೇಳಿತು. ಐಸ್‌ಕ್ಯಾಂಡಿ 'ನೀವು ಈಜು ಹೊಡೆಯಿರಿ... ನಾನೂ ಬರುತ್ತೇನೆ... ಆದರೆ ನೀರಿನಲ್ಲಿ ಈಜಾಡಲು ಬಂದರೆ ನಾನು ಕರಗಿ ಹೋಗುತ್ತೇನೆ... ಹಾಗಾಗಿ ನಾನು ದಡದ ಮೇಲೆಯೆ ಇದ್ದು ನೀವು ಈಜುವುದನ್ನು ನೋಡುತ್ತೇನೆ...' ಎಂದು ತನ್ನ ಗೆಳೆಯರಿಗೆ ಹೇಳಿತು. ಆಗಲಿ ಎಂದು ಮೂವರು ಹೊಳೆಗೆ ಹೊರಟವು.

ಹೊಳೆಯಲ್ಲಿ ಮನುಷ್ಯರು ಈಜಾಡುತ್ತಿದ್ದರು. ಈರುಳ್ಳಿ ಮತ್ತು ಟೊಮ್ಯಾಟೊ ಸಹ ನೀರಿಗೆ ಇಳಿದವು. ಐಸ್‌ಕ್ಯಾಂಡಿ ದಡದಲ್ಲಿ ನಿಂತು ಟೊಮ್ಯಾಟೊ, ಈರುಳ್ಳಿ ಈಜುವುದನ್ನು ನೋಡುತ್ತಿತ್ತು. ಮನುಷ್ಯರು ದಡದಲ್ಲಿ ಐಸ್‌ಕ್ಯಾಂಡಿ ನಿಂತದ್ದನ್ನು ನೋಡಿ 'ನೀನೂ ಈಜಲು ಬಾ...' ಎಂದು ಐಸ್‌ಕ್ಯಾಂಡಿಯನ್ನು ನೀರಿನೊಳಗೆ ತಳ್ಳಿದರು. ಪಾಪ, ಐಸ್‌ಕ್ಯಾಂಡಿ ನೀರಿನಲ್ಲಿ ಕರಗಿಹೋಯಿತು.

ಈರುಳ್ಳಿ, ಟೊಮ್ಯಾಟೊ ಈ ಹಾಳು ಮನುಷ್ಯರು ಅನ್ಯಾಯವಾಗಿ ತಮ್ಮ ಗೆಳೆಯನನ್ನು ಕೊಂದರು ಎಂದು ತುಂಬಾ ದುಃಖವಾಯಿತು.

ಈಗ ಈರುಳ್ಳಿ, ಟೊಮ್ಯಾಟೊ ಇಬ್ಬರೆ ಗೆಳೆಯರಾಗಿ ಉಳಿದುಕೊಂಡವು. ಆಗಾಗ ತಮ್ಮ ಸ್ನೇಹಿತ ಐಸ್‌ಕ್ಯಾಂಡಿಯನ್ನು ನೆನೆದು ತುಂಬ ಬೇಸರಪಟ್ಟುಕೊಳ್ಳುತ್ತಿದ್ದವು.



ಒಂದು ದಿನ ಸಿನಿಮಾಗೆ ಹೋಗೋಣ ಎಂದು ಈರುಳ್ಳಿ ಟೊಮ್ಯಾಟೊ ನಿರ್ಧರಿಸಿದವು. ಸಿನಿಮಾಗೆ ತುಂಬ ಜನರು ಬಂದಿದ್ದರು. ನೂಕುನುಗ್ಗಲಿನಲ್ಲಿ ಜನರು ಟೊಮ್ಯಾಟೊವನ್ನು ತುಳಿದುಬಿಟ್ಟರು. ಟೊಮ್ಯಾಟೊ ಅಪ್ಪಚ್ಚಿಯಾಯಿತು. ಈರುಳ್ಳಿ ತುಂಬ ದುಃಖದಿಂದ ಕಣ್ಣೀರು ಹಾಕಿತು. ಅದು ನನ್ನ ಸ್ನೇಹಿತರು ಸಾಯಲು ಈ ಮನುಷ್ಯರೆ ಕಾರಣ ಎಂದು ಸಿಟ್ಟಿನಿಂದ 'ಇಂದಿನಿಂದ ನನ್ನನ್ನು ಅಡುಗೆ ಮಾಡಲು ಕತ್ತರಿಸುವಾಗ ನಿಮಗೆ ಕಣ್ಣೀರು ಬರಲಿ...' ಎಂದು ಶಾಪ ಹಾಕಿತು.

ಅಂದಿನಿಂದ ಈರುಳ್ಳಿಯನ್ನು ಕತ್ತರಿಸಿದಾಗ ಮನುಷ್ಯರಿಗೆ ಕಣ್ಣಲ್ಲಿ ನೀರು ಬರುತ್ತದೆಯಂತೆ.

**(ಸಂಗ್ರಹ) ಮಾದ್ರೆ ರವೀಂದ್ರ, ಕೊಡಗು**